# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಓ ಎಸ್ ನಂ.146-2020** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಶಂಕರಪ್ಪ<br>51 ವರ್ಷ<br>ವ್ಯವಸಾಯ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 04-12-2020. |

**ಮುಖ್ಯ ವಿಚಾರಣೆಃ  ವಾದಿ ಪರ ವಕೀಲರಾದ ಶ್ರೀ ಎನ್.ಎಸ್  ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ  ಎಲ್ಲಾ ವಿಷಯಗಳು ಸತ್ಯವಾಗಿದ್ದು  ಅದನ್ನು ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.

ದಿ.07-12-2010 ರಂದು ಪ್ರತಿವಾದಿ ಬರೆದುಕೊಟ್ಟ ನೋಂದಾಯಿತ ಆಧಾರ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-1 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಹಾಗೂ ಪ್ರತಿವಾದಿಯ ಸಹಿಯನ್ನು  ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮಾಗಿ ನಿಪಿ-1(ಎ) ಮತ್ತು 1(ಬಿ) ಎಂದು, ನಿಪಿ-1 ಕ್ಕೆ ಸಾಕ್ಷಿದಾರರಾಗಿ ನಮ್ಮ ಗ್ರಾಮದವರಾದ  ಶಿವಣ್ಣ ಬಿನ್ ಪುಟ್ಟಸ್ವಾಮಿ ಹಾಗೂ ಜಿ.ವೆಂಕಟೇಶ್ ಬಿನ್ ಗೋವಿಂದೇಗೌಡ ಇವರುಗಳು ಸಾಕ್ಷಿದಾರರಾಗಿ ಸಹಿ ಮಾಡಿದ್ದು ಅವರು ಸಹಿಗಳನ್ನು ಸಾಕ್ಷಿ ನೋಡಿಗುರತಿಸಿದ್ದು ಅವುಗಳನ್ನ ಕ್ರಮವಾಗಿ ನಿಪಿ-(ಸಿ) ಮತ್ತು 1(ಡಿ)ಎಂದು, ನಿಪಿ-1 ನ್ನು ಮಹದೇವಯ್ಯ ಡೀಡ್ ರೈಟರ್ ಇವರು ತಯಾರಿಸಿರುತ್ತಾರೆ ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಇ)ಎಂದು,  ದಿ.20-02-2020 ರಂದು ನಾನು ನನ್ನ ವಕೀಲರ ಮೂಲಕ ಪ್ರತಿವಾದಿಗಳಿಗೆ ಕಳುಹಿಸಿದ ಲೀಗಲ್ ನೋಟಿಸ್ ನ

ಕಚೇರಿ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–2 ಎಂದು, ಅಂಚೆ ಸ್ವೀಕೃತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–3 ಎಂದು, ಅಂಚೆ ರಶೀದಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–4 ಎಂದು ಗುರುತಿಸಲಾಯಿತು.

(ಪ್ರತಿವಾದಿ ಪರ ವಕೀಲರು ಗೈರುಹಾಜರಾಗಿದ್ದು ಪಾಟೀ ಸವಾಲಿಗೆ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**